# ಲಾಲಿಪಾಪ್ ಮುನ್ಸಾಮಿ



ನಿರಂಜನ್ ಒಡೆಯರ್ ಮತ್ತು ಅಖಿಲಾ ಮುಖ್ಯ ಪಾತ್ರಗಳಲ್ಲಿ ನಟಿಸಿರುವ 'ಓಳ್ ಮುನ್ಸಾಮಿ' ಮೇ 11ರಂದು ತೆರೆಕಾಣುತ್ತಿದೆ. ಆನಂದಪ್ರಿಯ ನಿರ್ದೇಶನದ ಈ ಚೊಚ್ಚಿಲ ಸಿನಿಮಾ, ಕಳೆದ ಜನವರಿಯಲ್ಲಿ ತೀರಿಕೊಂಡ ಹಿರಿಯ ನಟ ಕಾಶೀನಾಥ್ ನಟನೆಯ ಕೊನೆಯ ಚಿತ್ರವೂ ಹೌದು.

ತನ್ನೊಂದಿಗೆ ಒಡನಾಡುವ ಎಲ್ಲರಿಗೂ ಬದುಕಿನ ಸಿಹಿಯನ್ನು ಉಣಬಡಿಸುವ ಪಾತ್ರವನ್ನು ಕಾಶೀನಾಥ್ ಪೋಷಿಸಿದ್ದಾರಂತೆ. ಸಿನಿಮಾದಲ್ಲಿ ಕಾಶೀನಾಥ್ ತಮ್ಮ ಬಳಿಗೆ ಬಂದವರೆಲ್ಲರಿಗೂ ಲಾಲಿಪಾಪ್ ನೀಡುತ್ತಾರಂತೆ. ಒಂದು ರೀತಿಯಲ್ಲಿ ಅವರು ತಮ್ಮ ಜೀವನದುದ್ದಕ್ಕೂ ಮಾಡಿದ್ದೂ ಸಿಹಿ ಹಂಚುವ ಕಾಯಕವನ್ನೇ. ಚಿತ್ರೀಕರಣದ ಸಂದರ್ಭದಲ್ಲಿ ಅವರು ತಮ್ಮ ಅನುಭವವನ್ನು ಹಂಚಿಕೊಂಡಿದ್ದು ಹಾಗೂ ಚಿತ್ರತಂಡಕ್ಕೆ ತೋರಿಸಿದ ಪ್ರೀತಿ ನಿರ್ದೇಶಕರ ಪಾಲಿಗೆ ಅವಿಸ್ಮರಣೀಯ ಅನುಭವವಾಗಿದೆ.

ನಿರಂಜನ್ ಹಾಗೂ ಅಖಿಲಾ ಅವರಿಗೂ ಮುನ್ಸಾಮಿಯ ಅನುಭವ ಖುಷಿ ಕೊಟ್ಟಿದೆ. ಆಸ್ತಿಕನಾಗಿ ನಟಿಸಿರುವ ಕಾಶೀನಾಥ್ ಅವರಿಗೆ ಸ್ಪರ್ಧೆ ನೀಡುವ ನಾಸ್ತಿಕ ಹಳ್ಳಿಹುಡುಗನ ಪಾತ್ರ ಅವರದು. 'ಕಾಶೀನಾಥ್ ನಮ್ಮ ಸಿನಿಮಾದ ಜಾಕ್‌ಪಾಟ್' ಎನ್ನುವುದು ನಿರಂಜನ್ ಬಣ್ಣನೆ. ಗಂಗಾ ಎನ್ನುವ ಮುಗ್ಧ ಹಳ್ಳಿಹುಡುಗಿಯ ಪಾತ್ರದಲ್ಲಿ ನಟಿಸಿರುವ ಅಖಿಲಾ ಅವರಿಗೂ ತಮ್ಮ ಪಾತ್ರ ಮತ್ತು ಪೋಷಾಕು ವಿಶೇಷದ್ದು ಅನ್ನಿಸಿದೆ.

ಸಿನಿಮಾ ನಿರ್ದೇಶನಕ್ಕೆ ಮುನ್ನ ಆನಂದಪ್ರಿಯ ಸಾಕಷ್ಟು ಹಳ್ಳಿಗಳನ್ನು ಸುತ್ತಿದ್ದಾರೆ. ಸುಳ್ಳನ್ನು ಹೇಳಿಕೊಂಡು ಜೀವಿಸುವ ಅನೇಕ ಜನರನ್ನು ತಮ್ಮ ಸುತ್ತಾಟದಲ್ಲಿ ನೋಡಿದ್ದಾರೆ. ಅವರ ಅಲೆದಾಟದ ಅನುಭವಗಳು ಚಿತ್ರಕಥೆಯಲ್ಲಿ ಸೊಗಸಾಗಿ ಮೂಡಿಬಂದಿವೆಯಂತೆ.

ಹಿಂಡು ಹುಡುಗಿಯರನ್ನು ಹಿಂದಿಕ್ಕಿಕೊಂಡಿರುವ 'ಹಲೋ ಮಾಮ' (ಮೇ 11ರಂದು ತೆರೆಗೆ) ಪ್ರೇಕ್ಷಕರಿಗೆ ಹಾಯ್ ಎನ್ನುತ್ತಿದ್ದಾನೆ. ಮೋಹನ್ ನಟನೆ–ನಿರ್ದೇಶನದ ಈ ಚಿತ್ರ ನಗುವನ್ನು ಬಂಡವಾಳವನ್ನಾಗಿ ನೆಚ್ಚಿಕೊಂಡಿರುವ ಸಿನಿಮಾ. ಚುನಾವಣಾ ಸಂದರ್ಭದಲ್ಲಿ ತಮ್ಮ ಚಿತ್ರವನ್ನು ತೆರೆಕಾಣಿಸುತ್ತಿರುವ ಮೋಹನ್, 'ದಯವಿಟ್ಟು ನನಗೊಂದು ಓಟು ಹಾಕಿ' ಎಂದು ಚಿತ್ರರಸಿಕರನ್ನು ಕೋರಿದ್ದಾರೆ. 'ನಿಮಗೆ ಏಕೆ ಮತ ಚಲಾಯಿಸಬೇಕು' ಎನ್ನುವ ಪ್ರಶ್ನೆಗೆ ಅವರು ಪ್ರಣಾಳಿಕೆಯನ್ನು ಮುಂದಿಡುತ್ತಾರೆ. ಆ ಪ್ರಣಾಳಿಕೆಯ ಎಲ್ಲ ರೀಲ್‌ಗಳಲ್ಲಿರುವ ಒಂದೇ ಅಂಶ 'ಮನರಂಜನೆ'.

'ಚಿತ್ರದುದ್ದಕ್ಕೂ ನಗು ಹಾಸುಹೊಕ್ಕಾಗಿದೆ. ಈ ತಲೆಮಾರಿಗೆ ಇಷ್ಟವಾಗುವ ಚಿತ್ರವಿದು' ಎನ್ನುವ ನಿರ್ದೇಶಕರು, ಚಿತ್ರದಲ್ಲಿ 'ಮಾಮ'ನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಮಾಮ ಎಂದಮೇಲೆ ನಗುವಿಗೆ, ಕಚಗುಳಿಯ ತುಂಟತನಕ್ಕೆ ಕೊನೆಮೊದಲಾದರೂ ಎಲ್ಲಿ? ಮೋಹನ್ ಜೊತೆಗೆ, ಅರವಿಂದ್ ಕೂಡ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಪೊಲೀಸ್–ವಕೀಲನ ಪಾತ್ರಗಳಲ್ಲೇ ಹೆಚ್ಚು ಕಾಣಿಸಿಕೊಳ್ಳುತ್ತಿದ್ದ ಅವರು, ಮಾಮನಿಗಾಗಿ ಕಾಮಿಡಿ ಪಾತ್ರಕ್ಕೆ ತಮ್ಮನ್ನು ಒಗ್ಗಿಸಿಕೊಂಡಿದ್ದಾರೆ. ಪಾತ್ರಕ್ಕಾಗಿ ಸಾಕಷ್ಟು ತಾಲೀಮನ್ನೂ ನಡೆಸಿದ್ದರಂತೆ. ಸಾಂಪ್ರತಾ ಚಿತ್ರದ ನಾಯಕಿ. ಅವರಿಗಿದು ಮೊದಲ ಸಿನಿಮಾ. ಒಳ್ಳೆಯ ಹಾಡುಗಾರರಾದ ಅವರು, ನಟಿಯಾಗಿ ನೆಲೆ ಕಂಡುಕೊಳ್ಳುವ ಪ್ರಯತ್ನದಲ್ಲಿದ್ದಾರೆ. ಸೌಜನ್ಯಾ, ಭೂಮಿಕಾ, ದಿಲೀಪ್ ಹಾಗೂ ಪೃಥ್ವಿ ತಾರಾಗಣದಲ್ಲಿರುವ ಕೆಲವರು. ಪ್ರಸಾದ್‌ಬಾಬು ಛಾಯಾಗ್ರಹಣ ಹಾಗೂ ಧರಮ್ ದೀಪ್ ಸಂಗೀತ ಚಿತ್ರಕ್ಕಿದೆ.

# ಮೋಹನಾಂಗ ಮಾಮ

